ಶ್ರೀ ಟಿ. ಆರ್. ಶಾಮಣ್ಣ.—ನಮ್ಮ ಯುವಕರಲ್ಲಿ ರಾಷ್ಟ್ರ ಪ್ರೇಮ ಮತ್ತು ರಾಷ್ಟ್ರ ಭಕ್ತಿ ಬೆಳೆಸುವುದಕ್ಕೆ ಸಾಕಾದಷ್ಟು ತರಬೇತಿ ಕೊಡುವುದರಿಂದ ಇದಕ್ಕೆ ಬೇಕಾದ ನಲಕರಣೆ ಒದಗಿಸಿ ಯಾವ ಉದ್ದೇಶದಿಂದ ಇದನ್ನು ಸ್ಥಾಪಿಸಿದೆ ಎಂಬುದನ್ನು ಗಮನಿಸಿ ಮುಂದುವರೆಸಲು ರಾಜ್ಯ ಸರ್ಕಾರ ಮನಸ್ಸುಮಾಡುವುದೇ ?

ಶ್ರೀ ಎ. ಎಸ್. ಕಾಜಲಗಿ.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ, ಬೇಕಾದರೆ ಪ್ರಶ್ನೆ ಬೇರೆ ಹಾಕಿ.

Construction of Bus stand at Mahalingapur

353. Sri K. P. NADGOUDA (Mudhol).—

Will the Minister for Labour be pleased to state:—

(*a*) the date of laying the foundation stone for construction of a new bus stand at Mahalingapur ;

(*b*) the reasons for delay in its construction ;

(*c*) whether the Government intends to complete the same this year ?

Sri AZEEZ SAIT (Minister for Labour).—

(*a*) 22nd February 1965.

(*b*) The Contractor to whom the work was entrusted, abandoned the work. His agency had to be terminated and fresh tenders had to be finalised.

(*c*) The work is recently resumed by M.S.R.T.C. and expected to be completed during the next year.

ಶ್ರೀ ಕೆ. ಪಿ. ನಾಡಗೌಡ.—ಈ ಕಂಟ್ರಾಕ್ಟರು ಯಾವ ತಾರೀಖು ಕೆಲಸ ಪ್ರಾರಂಭ ಮಾಡಿದ ಮತ್ತು ಯಾವ ತಾರೀಖು ಕೆಲಸ ಬಿಟ್ಟ ಎಂಬುದನ್ನು ತಿಳಿಸುವಿರಾ ?

†Sri AZEEZ SAIT.—This work was sanctioned in the year 1963-67. I have no information as to when the work was started and stopped by the contractor. However, his agency has been terminated. ಅವನ್ನು ರದ್ದು ಮಾಡಿದಮೇಲೆ ಹೊಸ ಟೆಂಡರನ್ನು ಕರೆದು ಬೇರೆಯವರಿಗೆ ಕೆಲಸ ವಹಿಸಲಾಗಿದೆ.

ಶ್ರೀ ಕೆ. ಪಿ. ನಾಡಗೌಡ.—ಹೊಸ ಟೆಂಡರನ್ನು ಒಪ್ಪಿಕೊಳ್ಳಲಾಗಿದೆಯೇ ?

Sri AZEEZ SAIT.—Tender has been approved.

ಶ್ರೀ ಕೆ. ಪಿ. ನಾಡಗೌಡ.—ಈ ಕೆಲಸ ಯಾವಾಗ ಪೂರ್ಣವಾಗುವುದು ?

ಶ್ರೀ ಅಜೀಜ್‌ಸೇಟ್.—ಒಂದು ವರ್ಷದಲ್ಲಿ ಪೂರ್ಣವಾಗುವ ನಿರೀಕ್ಷೆಯಿದೆ.

ಶ್ರೀ ಪಿ. ಎಂ. ಭಂಗಿ.—ಹಿಂದಿನ ಕಂಟ್ರಾಕ್ಟರು ಯಾರು ? ಈಗ ಹೊಸ ಟೆಂಡರನ್ನು ಯಾವ ದಿವಸ ಮಂಜೂರು ಮಾಡಲಾಗಿದೆ ? ಹೊಸಬರಾದರೂ ಕೆಲಸ ಪೂರ್ಣ ಮಾಡುವರೆಂಬ ಭರವಸೆ ಯಿದೆಯೇ ?

ಶ್ರೀ ಅಜೀಜ್ ಸೇಟ್.—ಪೂರ್ಣಮಾಡುವುದರಲ್ಲಿ ಅನುಮಾನವಿಲ್ಲ. ಸಂಪೂರ್ಣ ಭರವಸೆಯಿದೆ. ಕಂಟ್ರಾಕ್ಟರು ಯಾರು ಮುಂತಾದ ಸಮಾಚಾರ ನನ್ನಲ್ಲಿಲ್ಲ, ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ಟೆಂಡರು ಕೊಟ್ಟಿರುವವರು ಪೂರ್ಣ ಮಾಡದಿದ್ದರೆ ಬೇರೆ ಟೆಂಡರನ್ನು ಕರೆಯುವಿರಾ ?

ಶ್ರೀ ಅಜೀಜ್ ಸೇಟ್.—ಈಗ ಟೆಂಡರು ಹಾಕಿರುವವರಿಂದಲೇ ಪೂರ್ಣವಾಗುವುದು, ಆದುದರಿಂದ ಬೇರೆ ಕರೆಯುವ ಪ್ರಶ್ನೆಯೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹೊಸಬರು ಟೆಂಡರು ಕೊಟ್ಟಿರುವುದು ಯಾವಾಗ ? ಹಿಂದಿನ ಏಜೆನ್ಸಿಯನ್ನು ಟರ್ಮಿನೇಟ್ ಮಾಡಿದ್ದು ಯಾವಾಗ ?

Sri AZEEZ SAIT.—I have made it clear that this work sanctioned in the year 1966-67 and the work was entrusted to a contractor. At present, I do not know the name of that contractor and as to when the work was started and when stopped. However, fresh tenders were called for, tender was approved, work was entrusted and the work has been started, and it will be completed by the end of the year.

Sri V. N. PATIL.—The Hon'ble Minister did not give details as to when the work was first started, by whom, and when it was stopped ?

Sri AZEEZ SAIT.—If the hon. member wants the name of the first contractor and when the work was started and when stopped, I shall get the information and place it on the Table of the House.